**2ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಚಿಕ್ಕಮಗಳೂರು.**

**ಎಸ್.ಸಿ.ಸಂಖ್ಯೆ 25/2014**

**ಆರೋಪಿಯ ಹೆಸರು ಃ ಕೃಷ್ಣಮೂರ್ತಿ**

**ತಂದೆಯ ಹೆಸರು ಃ**

**ವಯಸ್ಸು ಃ**

**ಉದ್ಯೋಗ ಃ**

**ವಾಸಸ್ಥಳ ಃ**

**ಕಲಂ 313 ಸಿ.ಆರ್.ಪಿ.ಸಿ ಅಡಿಯಲ್ಲಿ ಆರೋಪಿಯ ಹೇಳಿಕೆ ಃ**

**ಪ್ರಶ್ನೆ ಃ1) ಃಅಭಿಯೋಜನೆಯ ಸಾಕ್ಷ್ಯಗಳ ಸಾಕ್ಷ್ಯ ವಿಚಾರವನ್ನು ಕೇಳಿದ್ದೀರಾ?**
**ಉತ್ತರ ಃ ಹೌದು.**

**ಪ್ರಶ್ನೆ-2) ಪ್ರಾ.ಸಾ.1 ಸುರೇಶ ಇವರು ತನ್ನ ಸಾಕ್ಷ್ಯದಲ್ಲಿ ಸುಮಾರು** ***ಎರಡು ವರ್ಷಗಳ ಹಿಂದೆ ಬಳ್ಳಿನೂರು- ಆಲದಹಳ್ಳಿ ರಸ್ತೆಯ ಮಧ್ಯ ಒಂದು ಮೃತ ದೇಹ ಬಿದ್ದಿದೆ ಅಂತ ತಿಳಿದುಬಂತೆಂದು, ಪೊಲೀಸರು ಮಹಜರ್ ಮಾಡಲು ಕರೆದರೆಂದು, ರಸ್ತೆಯ ಪಕ್ಕದಲ್ಲಿ ಮೃತ ದೇಹ ಬಿದ್ದಿತೆಂದು, ಮೊಣಕಾಲಿಗೆ ಏಟಾಗಿತ್ತು, ದೇಹದಲ್ಲಿ ಉಜ್ಜಿದ ಗಾಯವಾಗಿತ್ತು, ತಲೆ ಒಡೆದು ಮೆದುಳು ಹೊರಗೆ ಬಂದಿತ್ತು, ಸುಮಾರು 10 ಮೀಟರ್ ದೂರದಲ್ಲಿ ಒಂದು ಸ್ಟೀಲ್ ರಾಡ್ ಬಿದ್ದಿತ್ತು, ಮೃತ ದೇಹ ಇದ್ದ ಸ್ಥಳದಲ್ಲಿ ಸಾದಾ ಮಣ್ಣು ಮತ್ತು ರಕ್ತಕಲೆಯಾದ ಮಣ್ಣನ್ನು, ರಾಡ್‌ನ್ನು***

ಮತ್ತು ಒಂದು ಮ್ಯಾಟ್ ಬಿದ್ದಿತ್ತು, ಅದನ್ನು ತೆಗೆದುಕೊಂಡರೆಂದು, ಮೃತ ದೇಹದ ಛಾಯಾಚಿತ್ರಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ-2 ರಿಂದ ನಿಪಿ-7 ಎಂದು ಗುರುತಿಸಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಬಯಸುವಿರಾ?

ಉತ್ತರಃ ಸುಳ್ಳು

ಪ್ರಶ್ನೆಃ3) ಪ್ರಾ.ಸಾ.1ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ಸ್ಥಳದಲ್ಲಿ ಬಿದಿದ್ದ ರಾಡ್‌ನ್ನು ಮು.ಮಾ.1 ಎಂತಲೂ, ಎರಡು ಮ್ಯಾಟ್‌ಗಳನ್ನು ಮು,ಮಾ.2 ಎಂತಲೂ, ರಕ್ತಮಿಶ್ರಿತ ಮಣ್ಣನ್ನು ಮು.ಮಾ.3 ಎಂದೂ, ಸಾದಾ ಮಣ್ಣನ್ನು ಮು.ಮಾ.4 ಎಂದು ಗುರುತಿಸಿರುತ್ತಾರೆ, ಆ ಸಮಯದಲ್ಲಿ ಮಾಡಿದ ಮಹಜರ್‌ಗೆ ತಾನು ಸ್ಥಳದಲ್ಲಿ ಸಹಿ ಮಾಡಿರುತ್ತೇನೆಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಬಯಸುವಿರಾ?

ಉತ್ತರಃ ಸುಳ್ಳು

ಪ್ರಶ್ನೆಃ4) ಪ್ರಾ.ಸಾ.2 ಶ್ರೀ. ನೇಮಾನ್‌ಪಾಷಾ ಸಾಕ್ಷಿದಾರರು ತನ್ನ ಸಾಕ್ಷ್ಯದ ವಿಚಾರಣೆಯಲ್ಲಿ ನುಡಿಯುವುದೇನೆಂದರೆ ಸುಮಾರು ಎರಡು ವರ್ಷಗಳ ಹಿಂದೆ ಮಧ್ಯಾಹ್ನ 3ಃ30–4ಃ00 ಗಂಟೆ ಸಮಯದಲ್ಲಿ ಪೊಲೀಸರು ಬೀರೂರು ಪೊಲೀಸ್ ಠಾಣೆಗೆ ಕರೆಸಿದ್ದರೆಂದು, ತನ್ನ ಬೈಕ್‌ನ್ನು ಪೊಲೀಸರು ಹಿಡಿದುಕೊಂಡಿದ್ದರು, ಅದಕ್ಕೆ ದಂಡ ಕಟ್ಟಲು ಹೋಗಿದ್ದೆರೆಂದು, ಆ ಸಮಯದಲ್ಲಿ ಇಬ್ಬರು ವ್ಯಕ್ತಿಗಳು ಇದ್ದರು, ಅವರು ನ್ಯಾಯಾಲಯದ ಮುಂದಿರುವ 1 ಮತ್ತು 2ನೇ ಆರೋಪಿಗಳಾಗಿದ್ದು, ಸ್ಯಾಮ್‌ಸಾಂಗ್ ಮೊಬೈಲ್‌ನಲ್ಲಿ ಸಿಮ್ ಇತ್ತು, ನೋಕಿಯಾ ಮೊಬೈಲ್‌ನಲ್ಲಿ ಸಿಮ್ ಇರಲಿಲ್ಲ, ಅವುಗಳನ್ನು 1 ಮತ್ತು 2ನೇ ಆರೋಪಿಗಳು ಹಾಜರುಪಡಿಸಿದರು, ಆ ಸಮಯದಲ್ಲಿ ಅವುಗಳನ್ನು ಜಪ್ತಿಮಾಡಿಕೊಂಡು ನಿಪಿ-8 ರ ಪ್ರಕಾರ ಮಹಜರ್ ಮಾಡಿ, ಅದಕ್ಕೆ ನಾನು ಸಹಿ ಮಾಡಿ, ಆ ಮೊಬೈಲ್‌ಗಳನ್ನು ಗುರುತಿಸಿರುತ್ತಾರೆ, ನಿಪಿ-8 ರಡಿಯಲ್ಲಿ ವಶಪಡಿಸಿಕೊಂಡ ಮೊಬೈಲ್‌ಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ನೋಕೀಯಾ ಮೊಬೈಲ್ ಅನ್ನು ಮು.ಮಾ.5 ಎಂದು ಮತ್ತು

**ಸ್ಯಾಮ್‌ಸಂಗ್ ಮೊಬೈಲ್‌ನ್ನು ಮು.ಮಾ.6 ಎಂದು ಗುರುತಿಸಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಬಯಸುವಿರಾ?**

ಉತ್ತರ ಃ ಸುಳ್ಳು

ಪ್ರಶ್ನೆ-5) ಪ್ರಾ.ಸಾ.3 ಅಸ್ಲಾಂ ಇವರು ತಮ್ಮ ಸಾಕ್ಷ್ಯದಲ್ಲಿ, ತನ್ನನ್ನು ಬೀರೂರು ಪೊಲೀಸರು ಅಕ್ಟೋಬರ್ ತಿಂಗಳು 2013 ರಲ್ಲಿ ಠಾಣೆಗೆ 4.00 ಗಂಟೆಗೆ ಕರೆಸಿದ್ದರೆಂದು, ಬಸವರಾಜುರವರು ಸಹಾ ಬಂದಿದ್ದರು, ಪೊಲೀಸರು 3 ಜನರನ್ನು ಪೊಲೀಸ್ ಠಾಣೆಯಲ್ಲಿ ನಮಗೆ ತೋರಿಸಿದರೆಂದು, ಅವರು ನ್ಯಾಯಾಲಯದಲ್ಲಿರುವ 2ರಿಂದ 4ನೇ ಆರೋಪಿ ಗಳಾಗಿರುತ್ತಾರೆಂದು, ಅವರು ಕೊಲೆ ಮಾಡಿದ ಜಾಗವನ್ನು ತೋರಿಸುತ್ತೇವೆ ಅಂತ ಹೇಳಿದರು, ತಮ್ಮನ್ನು ಆರೋಪಿಗಳೊಂದಿಗೆ ಜೀಪಿನಲ್ಲಿ ಲಿಂಗದಹಳ್ಳಿಗೆ ಹೋಗುವ ರಸ್ತೆಯಲ್ಲಿ ಬಳಿನೂರಿನಿಂದ ಸ್ವಲ್ಪ ದೂರದಲ್ಲಿರುವ ಜಾಗಕ್ಕೆ ಕರೆದುಕೊಂಡು ಹೋದರು, ಅಲ್ಲಿ ರಸ್ತೆ 10 ರಿಂದ 12 ಅಡಿ ಇತ್ತು, ಒಬ್ಬ ವ್ಯಕ್ತಿಯನ್ನು ಇಬ್ಬರು ಎರಡೂ ಕಡೆ ಕೈಕಾಲುಗಳನ್ನು ಹಿಡಿದುಕೊಂಡು, ಇನ್ನೊಬ್ಬರು ವಾಹನವನ್ನು ಚಲಾಯಿಸಿ ಸಾಯಿಸಿರುವುದಾಗಿ ಹೇಳಿದರು, ವಾಹನವನ್ನು ತೋರಿಸುವುದಾಗಿ ತಿಳಿಸಿದರು. ನುಡಿದಿರುತ್ತಾರೆ, ಈ ಬಗ್ಗೆ ನೀವೇನಾದರೂ ಹೇಳಲು ಬಯಸುವಿರಾ?

ಉತ್ತರಃ ಸುಳ್ಳು

ಪ್ರಶ್ನೆಃ6) ಪ್ರಾ ಸಾ. 3 ಇವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ತದನಂತರ ಆರೋಪಿಗಳು ಕಡೂರು ರಸ್ತೆಗೆ ಕರೆದುಕೊಂಡು ಬಂದು ಎಸ್.ಆರ್.ಲಕ್ಷ್ಮಯ್ಯ ಬಡಾವಣೆಯಲ್ಲಿ ಮುಳ್ಳುಗಿಡಗಳು ಬೆಳೆದಿರುವ ಜಾಗದಲ್ಲಿ ಕ್ವಾಲಿಸ್ ಕಾರನ್ನು ನಿಲ್ಲಿಸಿದ್ದರೆಂದು, ಅದನ್ನು ತಮಗೆ ತೋರಿಸಿದರೆಂದು, ಆ ವಾಹನವನ್ನು ಕೊಲೆ ಮಾಡಲು ಉಪಯೋಗಿಸಿದ್ದಾಗಿ ಆರೋಪಿಗಳು ಹೇಳಿದರೆಂದು, ಆ ಕಾರಿನಲ್ಲಿ ಒಂದು ಚಪ್ಪಲಿ ಇತ್ತೆಂದು, ಅದು ಯಾರ ಚಪ್ಪಲಿ ಎಂದು ಆರೋಪಿಗಳನ್ನು ಕೇಳಿದಾಗ ಅದು ಮೃತನ ಚಪ್ಪಲಿ ಎಂದು ತಿಳಿಸಿದರೆಂದು, ಕಾರಿನ ಮುಂಭಾಗದ ಬಂಪರ್ ಮುರಿದಿತ್ತು, ಕಾರಿನ ಎಡಭಾಗದ ಮ್ಯಾಟ್ ಕಿತ್ತು ಹೋಗಿತ್ತೆಂದು

**ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಬಯಸುವಿರಾ?**

**ಉತ್ತರ : ಸುಳ್ಳು**

**ಪ್ರಶ್ನೆ:7) ಪ್ರಾ.ಸಾ. 3 ಸಾಕ್ಷಿದಾರರು ತನ್ನ ಮುಂದುವರೆದ ಸಾಕ್ಷ್ಯದಲ್ಲಿ ಪೊಲೀಸರು ಠಾಣೆಗೆ ಕಳುಹಿಸಿ ಠಾಣೆಯಲ್ಲಿ ವಶಪಡಿಸಿಕೊಂಡು ಇಟ್ಟಿದ್ದ ರಾಡ್ ಮತ್ತು ಎರಡು ಮ್ಯಾಟನ್ನು ತರಿಸಿದರು, ಸದರಿ ರಾಡ್ ಮತ್ತು ಮ್ಯಾಟ್‌ಗಳು ಕ್ವಾಲಿಸ್ ಕಾರಿನದ್ದಾಗಿತ್ತು, ರಾಡನ್ನು ಅಳತೆ ಮಾಡಿ ನೋಡಿದಾಗ ಅದು ಕ್ವಾಲಿಸ್ ಕಾರಿಗೆ ಹೊಂದಾಣಿಕೆಯಾಯಿತು, ಆ ಸಮಯದಲ್ಲಿ ಕಾರನ್ನು, ಚಪ್ಪಲಿಯನ್ನು ವಶಪಡಿಸಿಕೊಂಡಿದ್ದಕ್ಕೆ ಸ್ಥಳದಲ್ಲಿ ಪಂಚನಾಮೆಯನ್ನು ನಿಪಿ.9 ರಂತೆ ಮಾಡಿದರೆಂದು, ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಬಯಸುವಿರಾ?**

**ಉತ್ತರ : ಸುಳ್ಳು**

**ಪ್ರಶ್ನೆ 8) ಪ್ರಾ.ಸಾ.3 ಸಾಕ್ಷಿದಾರರು ತನ್ನ ಮುಂದುವರೆದ ಸಾಕ್ಷ್ಯದಲ್ಲಿ ಕೃತ್ಯ ನಡೆದ ಸ್ಥಳದಲ್ಲಿ ತೆಗೆದ ಫೋಟೊದಲ್ಲಿ ಸಾಕ್ಷಿ ತನ್ನ ಇರುವಿಕೆಯನ್ನು ಒಪ್ಪಿಕೊಂಡಿದ್ದು, ಅದನ್ನು ನಿಪಿ-12 ಎಂದು ಗುರುತಿಸಲಾಯಿತು, ಕ್ವಾಲಿಸ್ ಕಾರನ್ನು ಜಪ್ತಿಪಡಿಸಿಕೊಂಡ ಸ್ಥಳದಲ್ಲಿ ತೆಗೆದ ಫೋಟೋದಲ್ಲಿ ಸಾಕ್ಷಿ ತನ್ನ ಇರುವಿಕೆಯನ್ನು ಒಪ್ಪಿಕೊಂಡಿರುತ್ತಾರೆ, ಅದನ್ನು ನಿಪಿ-11 ಎಂದು, ಇನ್ನೊಂದು ಫೋಟೋದಲ್ಲಿ ಮೃತನ ಒಂದು ಚಪ್ಪಲಿಯಿದ್ದು, ನಿಪಿ-14 ಎಂದು ಹಾಗೂ 2 ಮ್ಯಾಟ್‌ಗಳನ್ನು ಸಾಕ್ಷಿ ಗುರುತಿಸಿದ್ದು, ಅವುಗಳನ್ನು ಮು.ಮಾ.2 ಎಂದು ರಾಡನ್ನು ಮು .ಮಾ.1 ಎಂದು ಗುರುತಿಸಲಾಗಿದೆ, ಜಪ್ತಿಪಡಿಸಿಕೊಂಡ ಚಪ್ಪಲಿಯನ್ನು ಮು .ಮಾ.7 ಎಂದು ಗುರುತಿಸಿಕೊಂಡು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಬಯಸುವಿರಾ?**

**ಉತ್ತರ : ಸುಳ್ಳು**

**ಪ್ರಶ್ನೆ-9) ಪ್ರಾ.ಸಾ.4 ಶ್ರೀಮತಿ ಗೀತಾ ಇವರು ತಮ್ಮ ಸಾಕ್ಷ್ಯದಲ್ಲಿ, ಮೃತ ಪುಟ್ಟಪ್ಪ ತನ್ನ *ಗಂಡ, ಸುಮಾರು 9 ವರ್ಷಗಳ ಹಿಂದೆ***

ಅವರ ಜೊತೆ ತನ್ನ ಮದುವೆ ಆಗಿತ್ತು, ಅತನ ಮೊದಲನೆ ಹೆಂಡತಿ ಶ್ಯಾಮಲ, ಆಕೆಯಿಂದ ವಿವಾಹ ವಿಚ್ಛೇದನ ಪಡೆದು ತನ್ನನ್ನು ವಿವಾಹವಾಗಿದ್ದರು, ದೇವಸ್ಥಾನದಲ್ಲಿ ವಿವಾಹ ಮಾಡಿಕೊಂಡು ವಿವಾಹವನ್ನು ನೋಂದಣಿ ಮಾಡಿಸಿಕೊಂಡಿದ್ದೆವು ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಬಯಸುವಿರಾ?

ಉತ್ತರಃಸುಳ್ಳು

*ಪ್ರಶ್ನೆಃ10)* ಪ್ರಾ.ಸಾ.*4* ರವರ ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ದಿಃ*14.10.2013* ರಂದು ಬೆಳಗ್ಗೆ ತನ್ನ ಗಂಡ ಮನೆಯಿಂದ ಹೊರಗೆ ಹೋಗಿದ್ದರು, *10* ಗಂಟೆಗೆ ವಾಪಸ್ಸು ಬಂದರು, ತಾನು ಊಟ ಮಾಡಲು ಕರೆದೆ, ಅವರು ಊಟ ಆಗಿದೆ ಅಂತ ಹೇಳಿದರು, ರಮೇಶ್ ಮತ್ತು ಅವರ ಸ್ನೇಹಿತರ ಜೊತೆ ಹೋಗಿದ್ದೆ, ಅವರು ತಿಂಡಿ ತಂದಿದ್ದರು, ಅವರ ಜೊತೆ ತಿಂದೆ ಅಂತ ಹೇಳಿದರು, ಅವರನ್ನು ತಾನು ಇದೇ ಮೊದಲು ನೋಡಿದ್ದು ಅಂತ ಹೇಳಿದರು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಬಯಸುವಿರಾ?.

ಉತ್ತರಃಸುಳ್ಳು

*ಪ್ರಶ್ನೆಃ11)* ಪ್ರಾ.ಸಾ.*4*ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ದಿಃ*13.10.2013* ರಂದು ಬೆಂಗಳೂರಿನಿಂದ ತನ್ನ ತಂದೆಯ ತಮ್ಮ ಮಲ್ಲಿಕಾರ್ಜುನ, ಚಿಕ್ಕಮ್ಮ ಲಕ್ಷ್ಮಿ ಅವರ ತಾಯಿ ನಾಗಮ್ಮ ತನ್ನ ಚಿಕ್ಕಪ್ಪನ ಮಗ ವಿನಯ್‌ಕುಮಾರ್, ಚಿಕ್ಕಮ್ಮನ ಚಿಕ್ಕಮ್ಮ ಪಾರ್ವತಮ್ಮ, ಅವರ ಮಗ ಕನಕಪ್ರಸಾದ್ ಬಂದಿದ್ದರು, ಅವರಿಗೆ ಮೂರು ದಿನ ರಜೆ ಇದ್ದಿದ್ದರಿಂದ ಕಲ್ಲತ್ತಿಗಿರಿ ಮತ್ತು ಬಾಬಾಬುಡನ್‌ಗಿರಿಯನ್ನು ನೋಡಲು ಬಂದಿದ್ದರು, ತಾನು ಮತ್ತು ತನ್ನ ಸಂಬಂಧಿಕರು ತೋಟಕ್ಕೆ ಎಳನೀರು ಕುಡಿಯಲು *11* ಗಂಟೆಗೆ ಹೋದೆವು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಬಯಸುವಿರಾ?

ಉತ್ತರಃ ಸುಳ್ಳು

*ಪ್ರಶ್ನೆ:12) ಪ್ರಾ.ಸಾ.4ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ಲಿಂಗದಹಳ್ಳಿಯಿಂದ 1 ಕಿ.ಮೀ ದೂರದಲ್ಲಿ ಹೆರದಂಕ್ಲು ಹತ್ತಿರ ತಮ್ಮ ತೋಟ ಇತ್ತು, ಅಲ್ಲಿಗೆ ನಡೆದುಕೊಂಡು ಹೋಗುತ್ತಿದ್ದೆವು, ಅರ್ಧ ದಾರಿಗೆ ಹೋದಾಗ ತೋಟದ ಕಡೆಯಿಂದ ಒಂದು ಬಿಳಿ ಬಣ್ಣದ ಟಾಟಾ ಸುಮೋ ಗಾಡಿ ಬಂತೆಂದು, ಅದರಲ್ಲಿ ತಮ್ಮ ಮನೆಯವರು ಕೂತಿದ್ದರು, ತಮ್ಮನ್ನು ನೋಡಿ ಕೆಳಗೆ ಇಳಿದರು, ಅದರಲ್ಲಿ 4 ಜನ ಇದ್ದರು, ಅದರಲ್ಲಿ ಎಲೆಕ್ಟ್ರಿಷಿಯನ್ ರಮೇಶ ತಮಗೆ ಪರಿಚಯ ಇದ್ದರು, ಉಳಿದವರು ನನಗೆ ಪರಿಚಯ ಇರಲಿಲ್ಲ, ತಮ್ಮ ಮನೆಯವರು ವಾಹನದಿಂದ ಇಳಿದು ತಮ್ಮ ಜೊತೆ ತೋಟಕ್ಕೆ ಬಂದರು, 2 – 2:30 ಗಂಟೆಗೆ ವಾಪಸ್ಸು ಮನೆಗೆ ಬಂದೆವು, ಊಟ ಮಾಡಿ ಮಲಗಿದರು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಬಯಸುವಿರಾ?*

*ಉತ್ತರ: ಸುಳ್ಳು*

*ಪ್ರಶ್ನೆ:13) ಪ್ರಾ.ಸಾ.4ರವರು ತಮ್ಮ ಸಾಕ್ಷ್ಯದ ಮುಂದುವರೆದ ಸಾಕ್ಷ್ಯದಲ್ಲಿ ಸಂಜೆ 5–6 ಗಂಟೆ ಸಮಯಕ್ಕೆ ರಮೇಶ ಎನ್ನುವವರು ಬಂದರು, ಬೆಳಗ್ಗೆ ತಿಂಡಿಯನ್ನು ಜೊತೆಯಲ್ಲಿ ತಿಂದವರು ಕರೆಯುತ್ತಿದ್ದಾರೆ ಎಂದು ನನ್ನ ಗಂಡನನ್ನು ರಮೇಶ್ ಕರೆದುಕೊಂಡು ಹೋದರು, ರಾತ್ರಿ 10 ಗಂಟೆ ಆದರೂ ಕೂಡ ಬರಲಿಲ್ಲ, ಮೊಬೈಲ್‌ನ್ನು ತೆಗೆದುಕೊಂಡು ಹೋಗಿರಲಿಲ್ಲ, ನನ್ನ ಗಂಡನ ಸ್ನೇಹಿತರಿಗೆ ಮೊಬೈಲ್ ಫೋನ್ ಮಾಡಿ ವಿಚಾರಿಸಿದೆ, ಯಾರೂ ಕೂಡ ತಮಗೆ ಗೊತ್ತಿಲ್ಲ ಅಂತ ಹೇಳಿದರು, ಬೆಳಗಿನ ಜಾವ 5 ಗಂಟೆಗೆ ತಾನು, ತನ್ನ ಚಿಕ್ಕಪ್ಪ ಸಿದ್ರಾಮಜ್ಜನ ಮನೆಗೆ ಹೋಗಿ ಆತನನ್ನು ಕರೆದುಕೊಂಡು ರಮೇಶ್‌ನ ಮನೆ ಎಲ್ಲಿದೆ ಅಂತ ಹುಡುಕಿಕೊಂಡು ಹೋದೆವು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಬಯಸುವಿರಾ?*

*ಉತ್ತರ: ಸುಳ್ಳು*

*ಪ್ರಶ್ನೆ:14) ಪ್ರಾ.ಸಾ.4 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ರಮೇಶನ ಮನೆಗೆ ಹೋಗಿ ಕೇಳಿದಾಗ ತಾವು ಬ್ರಾಂಡಿ*

ಶಾಪ್‌ನಲ್ಲಿ ಒಟ್ಟಿಗೆ ಕುಡಿದು ತನ್ನನ್ನು ಅಲ್ಲೇ ಬಿಟ್ಟು ಬೆಂಗಳೂರಿನಿಂದ ಬಂದವರು ಮತ್ತು ತನ್ನ ಗಂಡ ವಾಹನದಲ್ಲಿ ಹೋದರು ಅಂತ ತಿಳಿಸಿದರು, ಬೆಂಗಳೂರಿನಿಂದ ಬಂದ ವ್ಯಕ್ತಿಗಳ ಎರಡು ಮೊಬೈಲ್ ನಂಬರ್‌ಗಳನ್ನು ನನಗೆ ಕೊಟ್ಟರು, ತನ್ನ ಚಿಕ್ಕಪ್ಪನ ಹತ್ತಿರ ಇದ್ದ ಮೊಬೈಲ್‌ನಿಂದ ಆ ಎರಡು ನಂಬರ್‌ಗಳಿಗೆ ಫೋನ್ ಮಾಡಿದಾಗ ಒಂದರಲ್ಲಿ ನಾಟ್ ರೀಚಬಲ್ ಅಂತ ಬಂತು, ಇನ್ನೊಂದು ರಿಂಗ್ ಆಯಿತು, ರಿಸೀವ್ ಮಾಡಿದರು, ಮಾತನಾಡಲಿಲ್ಲ, ರಮೇಶ್‌ನನ್ನು ಕರೆದುಕೊಂಡು ಬಸ್‌ಸ್ಟ್ಯಾಂಡ್‌ಗೆ ಬಂದೆವು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಬಯಸುವಿರಾ?

ಉತ್ತರಃ ಸುಳ್ಳು

ಪ್ರಶ್ನೆಃ15) ಪ್ರಾ.ಸಾ.4ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ಬಳಿನೂರು ಮತ್ತು ಆಲ್ದಳ್ಳಿ ಹತ್ತಿರ ಒಂದು ಮೃತ ದೇಹ ಬಿದ್ದಿದೆ ಅಂತ ಜನ ಮಾತನಾಡುತ್ತಿದ್ದರು, ಎಲ್ಲರೂ ಕೂಡ ಯಾರು ಅಂತ ನೋಡಿಕೊಂಡು ಬರೋಣ ಅಂತ ಅಲ್ಲಿಗೆ ಹೋಗಿ ನೋಡಿದಾಗ ಆ ಮೃತ ದೇಹವು ತನ್ನ ಗಂಡನದ್ದಾಗಿತ್ತು, ಅವರು ಮಕಾಡೆ ಬಿದ್ದಿದ್ದರು, ಕಾಲೆಲ್ಲಾ ಕೊಚ್ಚಿದ್ದರು, ಬುರುಡೆ ಎಲ್ಲಾ ಚೂರಾಗಿತ್ತು, ಮೆದುಳು ರಸ್ತೆಯ ಮೇಲೆ ಬಿದ್ದಿತ್ತು, ಮಣ್ಣಿನ ಮೇಲೆ ರಕ್ತ ಚೆಲ್ಲಿತ್ತು, ತಲೆಯ ಹತ್ತಿರ ಎರಡು ಮ್ಯಾಟ್‌ಗಳು ಬಿದ್ದಿದ್ದವು, 10-15 ಅಡಿ ದೂರದಲ್ಲಿ ಒಂದು ಸ್ಟೀಲ್ ರಾಡ್ ಬೆಂಡ್ ಆಗಿ ಬಿದ್ದಿತ್ತು, ಇದು ಅಪಘಾತವೋ ಕೊಲೆಯೋ ಅಂತ ತಿಳಿಯಬೇಕಾದರೆ ದೂರು ಕೊಡಬೇಕು ಅಂತ ಹೇಳಿ ನಿಪಿ.1 ರಂತೆ ದೂರು ಕೊಟ್ಟೆವು, ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಬಯಸುವಿರಾ?

ಉತ್ತರಃ ಸುಳ್ಳು

ಪ್ರಶ್ನೆಃ16) ಪ್ರಾ.ಸಾ.4ರವರು ತನ್ನ ಮುಂದುವರೆದ ಸಾಕ್ಷ್ಯದಲ್ಲಿ ದಿಃ20.10.2013 ರಂದು ಒಂದು ಪತ್ರ ಬಂತು, ಅದರಲ್ಲಿ ತನ್ನ ಗಂಡನ ಕೊಲೆಯನ್ನು ಕೃಷ್ಣಮೂರ್ತಿ ಎನ್ನುವವರು ಆಸ್ತಿಗೋಸ್ಕರ ಮಾಡಿಸಿದ್ದಾರೆ, ಮೂರು ದಿನಗಳೊಳಗಾಗಿ

**ಅಡಿಕೆಯನ್ನು ಕುಯ್ಯುಸಿ, ಆ ಹಣದಿಂದ ಕೊಲೆಯನ್ನು ಮುಚ್ಚಿಹಾಕುತ್ತಾರೆ ಎಂದು ತಿಳಿಸಿದರು, ಆ ಪತ್ರದ ಒಳಗೆ ಇನ್ನೊಂದು ಪತ್ರ ಇತ್ತು, ಅದರಲ್ಲಿ ತರೀಕೆರೆ ಮತ್ತು ಚಿಕ್ಕಮಗಳೂರು ಪೊಲೀಸರಿಗೆ ಮತ್ತು ಟಿವಿಯವರಿಗೆ ವಿಷಯ ತಿಳಿಸಿ ಸತ್ಯವನ್ನು ಹೊರಗೆ ತನ್ನಿ ಅಂತ ಹೇಳಿದ್ದರು, 1ನೇ ಆರೋಪಿ ಸಾಲವನ್ನು ತೀರಿಸದೇ ನನ್ನ ಗಂಡನಿಗೆ ಆಸ್ತಿಯನ್ನು ಬಿಟ್ಟುಕೊಟ್ಟಿರಲಿಲ್ಲ. ಆಸ್ತಿಯ ವ್ಯಾಜ್ಯದ ಹಿನ್ನೆಲೆಯಲ್ಲಿ 1ನೇ ಆರೋಪಿ ಉಳಿದ ಆರೋಪಿಗಳ ಸಹಾಯ ಪಡೆದು ಹಣ ಕೊಟ್ಟು ಕೊಲೆ ಮಾಡಿಸಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಬಯಸುವಿರಾ?**

**ಉತ್ತರಃ ಸುಳ್ಳು**

**ಪ್ರಶ್ನೆಃ17) ಪ್ರಾ.ಸಾ.4 ಸಾಕ್ಷಿದಾರರು ತನ್ನ ಮುಂದುವರೆದ ಸಾಕ್ಷ್ಯದಲ್ಲಿ ತಾವು ತೋಟಕ್ಕೆ ಹೋಗಬೇಕಾದರೆ ತನ್ನ ಗಂಡ, ರಮೇಶ್ ಮತ್ತು 2 ರಿಂದ 3ನೇ ಆರೋಪಿಗಳು ಟೊಯೋಟಾ ಕ್ವಾಲೀಸ್ ವಾಹನದಲ್ಲಿ ಬಂದಿದ್ದರು, ತಾವು ಸ್ಥಳಕ್ಕೆ ಹೋಗಿ ನೋಡಿದಾಗ ಸ್ಥಳದಲ್ಲಿ ತನ್ನ ಗಂಡನ ಶವ ಬಿದ್ದಿತ್ತು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಬಯಸುವಿರಾ?**

**ಉತ್ತರ ಃ ಸುಳ್ಳು.**

**ಪ್ರಶ್ನೆಃ18) ಪ್ರಾ. ಸಾ.-5 ಮಲ್ಲಿಕಾರ್ಜುನ ತನ್ನ ಸಾಕ್ಷ್ಯದಲ್ಲಿ, *13.10.2013 ರಂದು ಎಳನೀರು ಕುಡಿಯಲು ತೋಟಕ್ಕೆ ಹೋಗುತ್ತಿದ್ದೆವು, ದಾರಿ ಮಧ್ಯದಲ್ಲಿ ಕ್ವಾಲೀಸ್ ಗಾಡಿಯಲ್ಲಿ ಪುಟ್ಟಸ್ವಾಮಿ, ರಮೇಶ್ ಹಾಗೂ ಇನ್ನು ಮೂರು ಜನ ಇದ್ದರು, ತಾನು ಮನೆಗೆ ಹೋಗಿ ಗಾಡಿಯನ್ನು ತೆಗೆದುಕೊಂಡು ಬರುತ್ತೇನೆ ತೋಟಕ್ಕೆ ನೀವು ಹೋಗಿ ಅಂತ ಹೇಳಿ 11ಃ30 ಗಂಟೆ ಸಮಯಕ್ಕೆ ಬಂದರು, ಸುಮಾರು 4 ಗಂಟೆ ಸಮಯಕ್ಕೆ ನಾವು ವಾಪಸ್ಸು ಮನೆಗೆ ಬಂದೆವು, ಸುಮಾರು 6 – 6ಃ30 ಗಂಟೆ ಸಮಯದಲ್ಲಿ ರಮೇಶ್ ಮನೆಯ ಬಳಿ ಬಂದು ನಿಮ್ಮ ಸ್ನೇಹಿತರು ಕರೆಯುತ್ತಿದ್ದಾರೆ ಬನ್ನಿ ಅಂತ ಕರೆದರು, ಆ ಮೂರು ಜನ ವ್ಯಕ್ತಿಗಳು ನನಗೆ ಪರಿಚಯಸ್ಥರಲ್ಲ, ಪುಟ್ಟಸ್ವಾಮಿ ರಮೇಶ್‌ರವರ ಜೊತೆ ಹೋದರು ಎಂದು*
**

ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಬಯಸುವಿರಾ?

ಉತ್ತರಃ ಸುಳ್ಳು.

ಪ್ರಶ್ನೆ:19) ಪ್ರಾ.ಸಾ.5 ಸಾಕ್ಷಿದಾರರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ನಂತರ ಪುಟ್ಟಸ್ವಾಮಿ ವಾಪಸ್ಸು ರಾತ್ರಿ 9-10 ಗಂಟೆಯಾದರೂ ಬರಲಿಲ್ಲ, ಅವನು ಮೊಬೈಲ್‌ನ್ನು ತೆಗೆದುಕೊಂಡು ಹೋಗಿರಲಿಲ್ಲ, ಬೆಳಗಿನ ಜಾವ ಸುಮಾರು 5 ಗಂಟೆಗೆ ತಾನು ಮತ್ತು ತನ್ನ ಮಗಳು ಪುಟ್ಟಸ್ವಾಮಿಯವರ ಕೆಲಸದ ಆಳಾದ ಸಿದ್ರಾಮಜ್ಜನ ಮೂಲಕ ರಮೇಶ್‌ನ ಮನೆಯ ಹತ್ತಿರ ಹೋಗಿ ಕೇಳಿದಾಗ ತಾನು, ಪುಟ್ಟಸ್ವಾಮಿ ಮತ್ತು ಆತನ 3 ಜನ ಸ್ನೇಹಿತರು ಮದ್ಯಪಾನ ಮಾಡಿದೆವು, ತದನಂತರ ಪುಟ್ಟಸ್ವಾಮಿ ಆತನ 3 ಜನ ಸ್ನೇಹಿತರೊಂದಿಗೆ ಹೋದರು, ಎಲ್ಲಿಗೆ ಹೋದರು ಅಂತ ಗೊತ್ತಾಗಲಿಲ್ಲ ಅಂತ ಹೇಳಿದರು, ರಮೇಶ್ ಎರಡು ನಂಬರ್‌ನ್ನು ಕೊಟ್ಟರು, ಅದಕ್ಕೆ ಫೋನ್ ಮಾಡಿದಾಗ ಒಂದಕ್ಕೆ ಹೋಗಲಿಲ್ಲ, ಇನ್ನೊಂದಕ್ಕೆ ಹೋಯಿತು ರಿಸೀವ್ ಮಾಡಲಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಬಯಸುವಿರಾ?

ಉತ್ತರಃ ಸುಳ್ಳು.

ಪ್ರಶ್ನೆ:20) ಪ್ರಾ.ಸಾ.5 ಸಾಕ್ಷಿದಾರರು ತನ್ನ ಮುಂದುವರೆದ ಸಾಕ್ಷ್ಯದಲ್ಲಿ ಸರ್ಕಲ್‌ಗೆ ಬಂದಾಗ ಅಲ್ಲಿ ಯಾರಿಗೋ ಅಪಘಾತವಾಗಿದೆ ಅಂತ ಜನ ಮಾತನಾಡುತ್ತಿದ್ದರು ಎಲ್ಲರೂ ಅಲ್ಲಿಗೆ ಹೋಗಿ ನೋಡಿದಾಗ ಪುಟ್ಟಸ್ವಾಮಿ ಮೃತಪಟ್ಟಿದ್ದರು, ಆತ ಅಪಘಾತದಲ್ಲಿ ಮೃತಪಟ್ಟಂತೆ ಕಂಡುಬಂತು, ಆದರೆ ಆತ ಅಪಘಾತದಲ್ಲಿ ಸತ್ತಿರಲಿಲ್ಲ, ರಸ್ತೆಯ ಮಧ್ಯದಲ್ಲಿ ಮೆದುಳು ಬಿದ್ದಿತ್ತು, ಆತನ ದೇಹ ರಸ್ತೆಯ ಪಕ್ಕದಲ್ಲಿ ಬಿದ್ದಿತ್ತು, ಒಂದು ಸ್ಟೀಲ್ ರಾಡ್ ಬಿದ್ದಿತ್ತೆಂದು ಹಾಗೂ ಆರೋಪಿತರನ್ನು ಗುರ್ತಿಸಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಬಯಸುವಿರಾ?

ಉತ್ತರ ಃ ಸುಳ್ಳು.

ಪ್ರಶ್ನೆ-21) ಪ್ರಾ. ಸಾ.-6 ಶ್ರೀಮತಿ ಲಕ್ಷ್ಮಿ ತಮ್ಮ ಸಾಕ್ಷ್ಯದಲ್ಲಿ, ರಮೇಶ್‌ರವರು ಬಂದು ಸ್ನೇಹಿತರು ಕರೆಯುತ್ತಿದ್ದಾರೆ ಎಂದು ಪುಟ್ಟಸ್ವಾಮಿಯನ್ನು ಕರೆದುಕೊಂಡು ಹೋದರು, ಮತ್ತೆ ಬರಲಿಲ್ಲ, ನಾವು ಊಟ ಮಾಡಿ ಮಲಗಿದೆವು, ಗೀತಾ ಎಲ್ಲರಿಗೂ ಫೋನ್ ಮಾಡಿ ವಿಚಾರಿಸುತ್ತಿದ್ದಳು, ಬೆಳಗ್ಗೆ 5 ಗಂಟೆ ಸಮಯಕ್ಕೆ ರಮೇಶ್‌ರವರ ಮನೆಯ ಹತ್ತಿರ ಹೋಗಿ ವಿಚಾರಿಸಿದಾಗ ಪುಟ್ಟಸ್ವಾಮಿಯನ್ನು ಅವರ ಸ್ನೇಹಿತರು ಕರೆದುಕೊಂಡು ಹೋದರು, ಏನಾಯಿತು ಅಂತ ಗೊತ್ತಿಲ್ಲ ಅಂತ ಹೇಳಿದರು, ಸರ್ಕಲ್ ಕಡೆಗೆ ನಾವು ಹೋದೆವು, ಅಲ್ಲಿಗೆ ಹೋದಾಗ ಬೀರೂರು–ಆಲ್ದಳ್ಳಿ ಮಧ್ಯೆ ಒಬ್ಬ ವ್ಯಕ್ತಿಯ ಶವ ಬಿದ್ದಿದೆ ಎಂದು ಗೊತ್ತಾಯಿತು, ನಾವು ಅಲ್ಲಿಗೆ ಹೋಗಿ ನೋಡಿದಾಗ ಪುಟ್ಟಸ್ವಾಮಿಯ ತಲೆಗೆ ಏಟಾಗಿತ್ತು, ಕೈಕಾಲಿಗೆಲ್ಲಾ ಗಾಯಗಳಾಗಿದ್ದವು, ಸ್ವಲ್ಪ ದೂರದಲ್ಲಿ ಒಂದು ರಾಡ್ ಬಿದ್ದಿತ್ತು, ಆರೋಪಿಗಳು ಪುಟ್ಟಸ್ವಾಮಿಯನ್ನು ಹೊಡೆದು ಕೊಲೆ ಮಾಡಿದ್ದಾರೆ ಅಂತ ಗೊತ್ತಾಯಿತು, ಅಣ್ಣ ತಮ್ಮನ ಮಧ್ಯೆ ಆಸ್ತಿ ವಿಚಾರದಲ್ಲಿ ಜಗಳವಾಗಿತ್ತು, ಆದ್ದರಿಂದ ಪುಟ್ಟಸ್ವಾಮಿಯನ್ನು ಕೊಲೆ ಮಾಡಿಸಿದ್ದಾರೆ ಅಂತ ಗೊತ್ತಾಯಿತು ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಬಯಸುವಿರಾ?

ಉತ್ತರ : ಸುಳ್ಳು.

ಪ್ರಶ್ನೆ-22) ಪ್ರಾ. ಸಾ.-7 ಶ್ರೀಮತಿ ಶ್ಯಾಮಲ ಇವರು ತಮ್ಮ ಸಾಕ್ಷ್ಯದಲ್ಲಿ, ಪುಟ್ಟಸ್ವಾಮಿ ತನ್ನ ಗಂಡ, ವಿವಾಹವಾಗಿ ಸಮಾರು 18 ವರ್ಷಗಳಾಗಿದೆ, ಘಟನೆಯ ದಿನ ಸ್ಥಳಕ್ಕೆ ಹೋಗಿ ನೋಡಿದಾಗ ಅವರು ಕೊಲೆಯಾಗಿದ್ದಾರೆ ಎಂದು ಗೊತ್ತಾಯಿತು, ಅವರ ಎರಡು ಕಾಲಿಗೆ, ಕೈಗೆ ಮತ್ತು ತಲೆಗೆ ಏಟಾಗಿತ್ತು, ಅಲ್ಲಿ ಒಂದು ರಾಡು ಬಿದ್ದಿತ್ತು, ಮೃತ ದೇಹವನ್ನು ನೋಡಿದಾಗ ಆತನಿಗೆ ಅಪಘಾತವಾಗಿರಲಿಲ್ಲ ಯಾರೋ ಒಡೆದು ಸಾಯಿಸಿದ್ದಾರೆಂದು ಗೊತ್ತಾಯಿತು ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಬಯಸುವಿರಾ?

ಉತ್ತರ : ಸುಳ್ಳು.

ಪ್ರಶ್ನೆ-23) ಪ್ರಾ. ಸಾ.-9 ಬಿ ರಘು ಇವರು ತಮ್ಮ ಸಾಕ್ಷ್ಯದಲ್ಲಿ, ತಾನು *ಕೆಎ-05/ಎಡಿ-1112 ಟೊಯೋಟಾ ಕ್ವಾಲೀಸ್ ವಾಹನದ ಮಾಲೀಕನಾಗಿರುತ್ತೇನೆ, ಬೆಳಗ್ಗೆ 7 ಗಂಟೆ ಸಮಯದಲ್ಲಿ ನಾಗರಾಜ್‌ರವರು ನಮ್ಮ ಕಾರು ಕಳೆದುಹೋಗಿದೆ ಅಂತ ಹೇಳಿ ತಿಳಿಸಿದರು. ನಂತರ ತನ್ನ ಚಾಲಕ ಸುಧಾಕರ್‌ಗೆ ದೂರವಾಣಿ ಮೂಲಕ ಸಂಪರ್ಕಿಸಿದಾಗ ರಾತ್ರಿ ಸುಧಾಕರ್‌ರವರು ಕುಡಿದು ರಿಂಗ್‌ರೋಡ್‌ಗೆ ಬಂದು ಮೋರ್ ಶಾಪಿಂಗ್ ಮಾಲ್‌ನ ಹತ್ತಿರ ನಿಲ್ಲಿಸಿಕೊಂಡಿದ್ದಾಗ ಒಂದು ಇಂಡಿಕಾ ಕಾರು ಬಂತು, ಅದರಲ್ಲಿದ್ದ ಮೂರು ಜನ ಇಲ್ಲಿ ವೈನ್ ಸ್ಟೋರ್ ಎಲ್ಲಿದೆ ಅಂತ ಕೇಳಿದರು, ಅವರಿಗೆ ವೈನ್ ಸ್ಟೋರ್‌ನ ವಿಳಾಸವನ್ನು ಹೇಳಿದೆ, ತನ್ನನ್ನು ಕರೆದುಕೊಂಡು ಹೋಗಿ ರೂ.1000/- ಕೊಟ್ಟರು, ಆತ ರಸ್ತೆ ದಾಟುವಾಗ ಅದರಲ್ಲಿದ್ದ ಒಬ್ಬ ಕ್ವಾಲೀಸ್ ಗಾಡಿಯನ್ನು ಸ್ಟಾರ್ಟ್ ಮಾಡಿಕೊಂಡು ತೆಗೆದುಕೊಂಡು ಹೋದರು, ಇನ್ನುಳಿದ ಇಬ್ಬರೂ ಕೂಡ ತಕ್ಷಣ ಕಾರಿನಲ್ಲಿ ಕೂತುಕೊಂಡು ಹೊರಟುಹೋದರು ಅಂತ ತಿಳಿಸಿದರು* ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಬಯಸುವಿರಾ?

ಉತ್ತರ ಃ ಸುಳ್ಳು.

ಪ್ರಶ್ನೆಃ24) *ಪ್ರಾ.ಸಾ.9 ಸಾಕ್ಷಿದಾರನು ತನ್ನ ಮುಂದುವರೆದ ಸಾಕ್ಷ್ಯದಲ್ಲಿ ವಾಹನವನ್ನು ಹುಡುಕಿದೆವು ಸಿಗಲಿಲ್ಲ, ನಂತರ ದಿಃ06.10.2013 ರಂದು ಸುಧಾಕರನ ಮೂಲಕ ದೂರನ್ನು ಕೊಡಿಸಿದ ನಂತರ ಪೊಲೀಸರು ದಿಃ29.10.2013 ರಂದು ಬೀರೂರು ಪೊಲೀಸರು ನಮ್ಮ ವಾಹನ ಸಿಕ್ಕಿದೆ ಅಂತ ಹೇಳಿ ಅದನ್ನು ಗುರುತಿಸಲು ಕರೆಸಿದ್ದರು, ಆಗ ತಾನು ಮತ್ತು ತನ್ನ ಚಾಲಕ ಸುಧಾಕರ್ ಬೀರೂರಿಗೆ ಬಂದು, ಅಲ್ಲಿ ತಮ್ಮ ಗಾಡಿ ಇತ್ತು, ಬೀರೂರು ಪೊಲೀಸ್ ಠಾಣೆಯಲ್ಲಿ ನ್ಯಾಯಾಲಯದ ಮುಂದಿರುವ ನಾಲ್ಕು ಜನ ಆರೋಪಿಗಳು ಇದ್ದರು, ತಮ್ಮ ಕಾರಿನ ಚಾಲಕ ಸುಧಾಕರ್ 2 ರಿಂದ 4ನೇ ಆರೋಪಿಗಳನ್ನು ಗುರುತಿಸಿ, 1ನೇ ಆರೋಪಿಯ ತಮ್ಮನನ್ನು ಕೊಲೆ ಮಾಡಲು 2 ರಿಂದ 4ನೇ ಆರೋಪಿಗಳು ನನ್ನ ವಾಹನವನ್ನು ಉಪಯೋಗಿಸಿದರು ಅಂತ ಗೊತ್ತಾಯಿತು* ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಬಯಸುವಿರಾ?

ಉತ್ತರ ಃ ಸುಳ್ಳು.

ಪ್ರಶ್ನೆ-25) ಪ್ರಾ. ಸಾ.-10 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ, *ದಿಃ 15.10.2013 ರಂದು ಮಧ್ಯಾಹ್ನ 3.30 ಗಂಟೆ ಸಮಯದಲ್ಲಿ ನ್ಯಾಯಾಲಯದ ಕರ್ತವ್ಯದಲ್ಲಿ ಇದ್ದಾಗ ಬೀರೂರು ಠಾಣಾಧಿಕಾರಿಗಳು ದೂರವಾಣಿ ಮುಖೇನ ಬರಲಿಕ್ಕೆ ಹೇಳಿದರು, ಈ ಕೇಸಿನ ಪ್ರ.ವ.ವರದಿಯನ್ನು ನಿಪಿ.24ರಂತೆ ನ್ಯಾಯಾಲಯಕ್ಕೆ ತಲುಪಿಸುವಂತೆ ತಿಳಿಸಿದರೆಂದು ತಾನು ಪ್ರ.ವ.ವ.ಯನ್ನು ಪಡೆದು ಸಂಜೆ 6.55 ಕ್ಕೆ ನ್ಯಾಯಾಧೀಶರ ಗೃಹ ಕಚೇರಿಯಲ್ಲಿ ಸಲ್ಲಿಸಿ ವರದಿ ಮಾಡಿರುತ್ತೇನೆ* ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಬಯಸುವಿರಾ?

ಉತ್ತರ ಃ. ಸುಳ್ಳು.

*ಪ್ರಶ್ನೆಃ26) ಪ್ರಾ.ಸಾ.12 ಶ್ರೀಮತಿಃ ಪಾರ್ವತಮ್ಮ ಇವರು ತಮ್ಮ ಸಾಕ್ಷ್ಯದಲ್ಲಿ ಸುಮಾರು 6 ಗಂಟೆ ಸಮಯಕ್ಕೆ ರಮೇಶ ರವರು ಪುಟ್ಟಸ್ವಾಮಿಯನ್ನು 3 ಜನ ಕರೆಯುತ್ತಿದ್ದಾರೆ ಬನ್ನಿ ಎಂದು ಕರೆದುಕೊಂಡು ಹೋದರು ನಂತರ ಬರಲಿಲ್ಲ, ರಾತ್ರಿ 10-11 ಗಂಟೆಯವರೆಗೆ ಕಾದರು ಬರಲಿಲ್ಲ, ನಂತರ ತನ್ನ ಮಗ ಕನಕಪ್ರಸಾದ್‌ರವರು ರಮೇಶ ರವರ ಮನೆಗೆ ಹೋಗಿ ವಿಚಾರಿಸಿದಾಗ ಪುಟ್ಟಸ್ವಾಮಿಯವರು ಎಲ್ಲಿ ಹೋದರು ಎಂದು ನನಗೆ ಗೊತ್ತಿಲ್ಲ ಎಂದು ಹೇಳಿದರು, ಬೆಳಿಗ್ಗೆ ಅಪಘಾತದಲ್ಲಿ ಯಾರೋ ಮೃತಪಟ್ಟಿದ್ದಾರೆ ಅಂತ ತಿಳಿದು ಬಂತು ತಾವೆಲ್ಲರು ಅಲ್ಲಿಗೆ ಹೋಗಿ ನೋಡಿದಾಗ ಅದು ಪುಟ್ಟಸ್ವಾಮಿಯವರ ಶವವಾಗಿತ್ತು, ನಂತರ ಕೆಲವರನ್ನು ಪೊಲೀಸರು ತಮ್ಮ ವಶಕ್ಕೆ ತೆಗೆದುಕೊಂಡಿದ್ದಾರೆ ಎಂದು ಗೊತ್ತಾಯಿತು, ನಾವು ಅಲ್ಲಿ ಹೋಗಿ ನೋಡಿದೆವು, ಅವರು 2 ರಿಂದ 4ನೇ ಆರೋಪಿಗಳು ಆಗಿರುತ್ತಾರೆ, 1ನೇ ಆರೋಪಿಗೂ ಮೃತ ಪುಟ್ಟಸ್ವಾಮಿಗೂ ಆಸ್ತಿ ವಿಚಾರದಲ್ಲಿ ಬಿನ್ನಾಭಿಪ್ರಾಯವಿತ್ತು, ಅವರೇ ಕೊಲೆಯನ್ನು 2 ರಿಂದ 4ನೇ ಆರೋಪಿಗಳ ಮೂಲಕ ಮಾಡಿಸಿದ್ದಾರೆ ಎಂದು ಗೊತ್ತಾಯಿತು* ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಬಯಸುವಿರಾ?

ಉತ್ತರ ಃ. ಸುಳ್ಳು.

ಪ್ರಶ್ನೆಃ27) ಪ್ರಾ.ಸಾ.13 ಶ್ರೀ ಕನಕಪ್ರಸಾದ್ ಇವರು ತನ್ನ ಸಾಕ್ಷ್ಯದಲ್ಲಿ ಸುಮಾರು 6.45-7 ಗಂಟೆ ಸುವಯದಲ್ಲಿ ರಮೇಶ ರವರು ಬಂದು ಯಾರೋ ಕರೆಯುತ್ತಿದ್ದಾರೆ ಬನ್ನಿ ಎಂದು ಪುಟ್ಟಸ್ವಾಮಿಯವರನ್ನು ಕರೆದುಕೂಂಡು ಹೋದರು, ರಾತ್ರಿ ಎಷ್ಟು ವತ್ತು ಆದರು ಮನೆಗೆ ಬರಲಿಲ್ಲ, ಅವರ ಹೆಂಡತಿ ಅಳುತ್ತಾ ಇದ್ದರು, ವಿನಯ್ ಕುಮಾರ್ ತನ್ನನ್ನು ಕರೆದುಕೊಂಡು ರಮೇಶರವರ ಮನೆಗೆ ಕರೆದುಕೊಂಡು ಹೋದರು, ಅಲ್ಲಿ ಅವರನ್ನು ವಿಚಾರಿಸಿದಾಗ 3 ಜನ ವ್ಯಕ್ತಿಗಳು ಪುಟ್ಟಸ್ವಾಮಿಯನ್ನು ಕರೆದುಕೊಂಡು ಹೋದರು, ಎಲ್ಲಿಗೆ ಕರೆದುಕೊಂಡು ಹೋದರು ಎಂದು ನನಗೆ ಗೊತ್ತಿಲ್ಲ ಎಂದು ಹೇಳಿದರು ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಬಯಸುವಿರಾ?

ಉತ್ತರಃ ಸುಳ್ಳು.

ಪ್ರಶ್ನೆಃ28) ಪಾ.ಸಾ.13 ಸಾಕ್ಷಿದಾರರು ತನ್ನ ಮುಂದುವರೆದ ಸಾಕ್ಷ್ಯದಲ್ಲಿ ಅಕ್ಕ ರಮೇಶನ ಮನೆಗೆ ಹೋದರು, ಅಲ್ಲಿ ರಮೇಶ 2 ಫೋನ್ ನಂಬರ್‌ನ್ನು ಕೊಟ್ಟರು, ಆ ಫೋನ್‌ಗೆ ಕಾಲ್ ಮಾಡಲು ಪ್ರಯತ್ನಿಸುತ್ತಿದ್ದರು, ತಾನು ರಸ್ತೆ ಕಡೆಗೆ ಹೋದೆ ಅಲ್ಲಿ ಇದ್ದವರು ಬೀರೂರು ಲಿಂಗದಳ್ಳಿ ರಸ್ತೆ ಮಧ್ಯದಲ್ಲಿ ಯಾರನ್ನೊ ಹೊಡೆದಾಕಿದ್ದಾರೆ ಎಂದು ಹೇಳಿದರು, ತಾನು ಬಂದು ಗೀತಾಗೆ ತಿಳಿಸಿದೆ, ತಾವೆಲ್ಲ ಆ ಸ್ಥಳಕ್ಕೆ ಹೋದೆವು, ಆ ಶವ ಪುಟ್ಟಸ್ವಾಮಿಯವರದಾಗಿತ್ತು ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಬಯಸುವಿರಾ?

ಉತ್ತರಃ ಸುಳ್ಳು.

ಪ್ರಶ್ನೆಃ29) ಪ್ರಾ.ಸಾ.13 ಸಾಕ್ಷಿದಾರರು ತನ್ನ ಮುಂದುವರೆದ ಸಾಕ್ಷ್ಯದಲ್ಲಿ 2 ರಿಂದ 4ನೇ ಆರೋಪಿಗಳನ್ನು ಟೊಯೊಟೊ ವಾಹನದಲ್ಲಿ ನೋಡಿರುತ್ತೇನೆ, 1ನೇ ಆರೋಪಿಯನ್ನು ನಾನು ಪೊಲೀಸ್ ಠಾಣೆಯ ಹತ್ತಿರ ನೋಡಿದ್ದೆ, ಅದಕ್ಕೂ ಮೊದಲು ನಾನು ನೋಡಿರುವುದಿಲ್ಲ, ಮೃತ ಪುಟ್ಟಸ್ವಾಮಿಯವರ ಮೇಲೆ ವಾಹನವನ್ನು ಹತ್ತಿಸಿ ರಾಡ್‌ನಿಂದ ಹೊಡೆದು ಕೊಲೆ ಮಾಡಿರುತ್ತಾರೆ, ಅವರ ಕೊಲೆಯನ್ನು ಆಸ್ತಿ ವಿಚಾರಕ್ಕೆ ಮಾಡಿಸಿದ್ದಾರೆ ಎಂದು ಗೊತ್ತಾಯಿತು, ಎಂದು

ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಬಯಸುವಿರಾ?

ಉತ್ತರಃ ಸುಳ್ಳು.

*ಪ್ರಶ್ನೆ:30)* ಪ್ರಾ.ಸಾ.14 ಶ್ರೀ ಬಿ.ಎಸ್.ದಾದಾ ಹಯಾತ್ ಪೀರ್ ಇವರು ತನ್ನ ಸಾಕ್ಷ್ಯದಲ್ಲಿ ನುಡಿಯುವುದೇನೆಂದರೆ ಪಿಎಸ್ಐ ಮತ್ತು 1ನೇ ಆರೋಪಿ ಕೃಷ್ಣಮೂರ್ತಿಯವರೊಂದಿಗೆ ಕೆ.ಎ.14/ಎ-5768 ರಲ್ಲಿ ಬೀರೂರಿನಿಂದ ಬೆಂಗಳೂರಿಗೆ ಹೋಗಿ ಆರೋಪಿ 1ರವರು ಕೊಟ್ಟ ಮಾಹಿತಿ ಪ್ರಕಾರ ಬೆಂಗಳೂರಿನಲ್ಲಿ ಬೆಳಿಗ್ಗೆ 6.30 ಗಂಟೆಗೆ ಗೊಟ್ಟಿಕೆರೆಯ 2ನೇ ಆರೋಪಿಯ ಮನೆಗೆ ಹೋಗಿ ಆತನನ್ನು ವಶಕ್ಕೆ ತೆಗೆದುಕೊಂಡು, ನಂತರ ಪಿಎಸ್ಐ ರವರು 2ನೇ ಆರೋಪಿಯನ್ನು ಉಳಿದ 3 ಮತ್ತು 4ನೇ ಆರೋಪಿಗಳ ಪತ್ತೆಗೆ ಮಾಹಿತಿಯನ್ನು 2ನೇ ಆರೋಪಿಯಿಂದ ತೆಗೆದುಕೊಂಡು ಆತ ಕೊಟ್ಟ ಮಾಹಿತಿಯಂತೆ ಬೆಳಿಗ್ಗೆ 7.30ಕ್ಕೆ 3ನೇ ಆರೋಪಿಯ ಮನೆಗೆ ಹೋಗಿ ಆತನನ್ನು ಸಹ ವಶಕ್ಕೆ ತೆಗೆದುಕೊಂಡು, ಅಲ್ಲಿಂದ 8 ಗಂಟೆಗೆ 4ನೇ ಆರೋಪಿಯ ಮನೆಗೆ ಹೋಗಿ ಕೊತ್ತನೂರು ದಿಣ್ಣೆ ಬಳಿ 4ನೇ ಆರೋಪಿಯನ್ನು ವಶಕ್ಕೆ ಪಡೆದು, ಅಲ್ಲಿಂದ ಬೆಳಿಗ್ಗೆ 9 ಗಂಟೆಗೆ 4 ಜನ ಆರೋಪಿಗಳನ್ನು ಕಾರಿನಲ್ಲಿ ಕೂರಿಸಿಕೊಂಡು ಬೆಂಗಳೂರಿನಿಂದ ಬೀರೂರಿಗೆ ವಾಪಸ್ಸು ಬಂದು ಆರೋಪಿಗಳನ್ನು ಸಿಪಿಐ ಬೀರೂರು ವೃತ್ತ ನಿರೀಕ್ಷಕರ ಮುಂದೆ ಹಾಜರು ಪಡಿಸಿರುತ್ತೇನೆ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಬಯಸುವಿರಾ?

ಉತ್ತರಃ ಸುಳ್ಳು.

*ಪ್ರಶ್ನೆ:31)* ಪ್ರಾ.ಸಾ.15 ಶ್ರೀ ಸಚಿನ್‌ಕುಮಾರ್ ಇವರು ತನ್ನ ಸಾಕ್ಷ್ಯದಲ್ಲಿ ದಿಃ14.10.2013ರ ರಾತ್ರಿ ಗಣಪತಿ ಉತ್ಸವದ ಕರ್ತವ್ಯದಲ್ಲಿ ಇದ್ದಾಗ ಬೆಳಿಗ್ಗಿನ ಜಾವ ಯಾವುದೋ ವ್ಯಕ್ತಿಯನ್ನು ಕೊಲೆ ಮಾಡಿ ರಸ್ತೆಯಲ್ಲಿ ಹಾಕಿದ್ದಾರೆ ಎಂದು ಮಾಹಿತಿ ಬಂದ ಮೇರೆಗೆ ನಾನು ಸಿಬ್ಬಂಧಿಯೊಂದಿಗೆ ಬಳ್ಳಿಗನೂರು, ಹೊಗರೆಹಳ್ಳಿ ರಸ್ತೆಗೆ ತೆರಳಿ ಒಬ್ಬ ವ್ಯಕ್ತಿಯ ಶವ ಬಿದಿದ್ದು ಅವರ ಗುರುತು ಅಚ್ಚಲು ಆಗಲಿಲ್ಲ, ಅಲ್ಲಿ ಸಿಬ್ಬಂದಿಯನ್ನು ನೇಮಿಸಿ ಠಾಣೆಗೆ ಬಂದಿರುತ್ತೇನೆ, ದಿಃ

15.10.2013 ರಂದು ಮಧ್ಯಾಹ್ನ 3 ಗಂಟೆಗೆ ಈ ಕೇಸಿನ ಪಿರ್ಯಾದಿ ಗೀತಾರವರ ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಸ್ವೀಕರಿಸಿ ಠಾಣಾ ಮೊ ನಂಬರ್ 132/2013 ಬಾ.ದಂ.ಸಂ ಕಲಂ 302 ರಡಿಯಲ್ಲಿ ಪ್ರಕರಣವನ್ನು ದಾಖಲಿಸಿ ಪ್ರ.ವ.ವ ಯನ್ನು ನ್ಯಾಯಾಲಯಕ್ಕೆ ಸುರೇಶ್‌ರವರ ಮುಖಾಂತರ ಕಳುಹಿಸಿಕೊಟ್ಟಿರುತ್ತೇನೆ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಬಯಸುವಿರಾ?

ಉತ್ತರಃ ಸುಳ್ಳು.

ಪ್ರಶ್ನೆಃ32) ಪ್ರಾ.ಸಾ.15 ಸಾಕ್ಷಿದಾರರು ತನ್ನ ಮುಂದುವರೆದ ಸಾಕ್ಷ್ಯದಲ್ಲಿ ಮಧ್ಯಾಹ್ನ 3.30 ಗಂಟೆಗೆ ಠಾಣೆಯಿಂದ ಕೃತ್ಯ ನಡೆದ ಸ್ಥಳಕ್ಕೆ ತೆರಳಿ ಅಲ್ಲಿ ಪಂಚರಾದ ಸತೀಶ ಮತ್ತು ರಾಜಪ್ಪ ಅವರ ಸಮಕ್ಷಮ ಪಂಚನಾಮೆಯನ್ನು ಜರುಗಿಸಿರುತ್ತೇನೆ, ಆರೋಪಿಗಳು ಕೃತ್ಯಕ್ಕೆ ಉಪಯೋಗಿಸಿದ ಸ್ಟೀಲ್ ರಾಡ್‌ನ್ನು ಸ್ಥಳದಿಂದ 25 ಅಡಿ ದೂರದಲ್ಲಿ ಬಿದ್ದಿತ್ತು, 2 ರಬ್ಬರ್ ಮ್ಯಾಟ್‌ನ್ನು, ರಾಡ್‌ನ್ನು ಕೃತ್ಯ ನಡೆದ ಸ್ಥಳದಲ್ಲಿ ರಕ್ತವಿಲ್ಲದ ಮತ್ತು ರಕ್ತ ಅತ್ತಿದ ಮಣ್ಣನ್ನು ಪ್ರತ್ಯೇಕವಾಗಿ ಪ್ಯಾಕ್ ಮಾಡಿ, ಸೀಲು ಮಾಡಿ ಮಹಜರ್ ನಡಿಯಲ್ಲಿ ವಶಪಡಿಸಿಕೊಂಡಿದ್ದು ಅವುಗಳನ್ನು ಮಾಲು ಪಟ್ಟಿಯಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಬಯಸುವಿರಾ?

ಉತ್ತರಃ ಸುಳ್ಳು.

ಪ್ರಶ್ನೆಃ33) ಪ್ರಾ.ಸಾ.15 ರವರು ತನ್ನ ಮುಂದುವರೆದ ಸಾಕ್ಷ್ಯದಲ್ಲಿ ಸ್ಥಳದಲ್ಲಿ ತಯಾರಿಸಿದ ಕಚ್ಚಾ ನಕ್ಷೆಯನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ27 ಎಂದು ಸಾಕ್ಷಿಯ ಸಹಿಯನ್ನು ನಿಪಿ27(ಎ) ಎಂದು ಗುರುತಿಸಲಾಯಿತು, ನಂತರ ಕೃತ್ಯ ನಡೆದ ಸ್ಥಳದಿಂದ ಶವವನ್ನು ಬೀರೂರು ಸರ್ಕಾರಿ ಆಸ್ಪತ್ರೆಯ ಶವಗಾರಕ್ಕೆ ಸ್ಥಳಾಂತರಿಸಿ ಪಂಚರಾದ ಪರಮೇಶ್ವರಪ್ಪ, ನೀಲಕಂಠ, ಗಣೇಶ್ ರವರು ಸಮಕ್ಷಮ ಶವ ಪಂಚನಾಮೆಯನ್ನು ಸಂಜೆ 5.30 ರಿಂದ ರಾತ್ರಿ 8.00 ಗಂಟೆಯವರೆಗೆ ಮಾಡಿರುತ್ತೇನೆ, ಅದೇ ದಿನ ಸಾಕ್ಷಿದಾರರಾದ ಕೃಷ್ಣ ಮೂರ್ತಿ, ಮಂಜುಳಮ್ಮ, ಗುಂಡಪ್ಪ, ಸಂತೋಷ ಮತ್ತು ಶ್ರೀನಿವಾಸ ರವರ ಹೇಳಿಕೆಯನ್ನು ಪಡೆದಿರುತ್ತೇನೆ, ಶವ

ತನಿಖೆ ನಂತರ ಹೆಚ್.ಸಿ ತಿಪ್ಪೆಸ್ವಾಮಿ ಇವರನ್ನು ಶವ ಪರೀಕ್ಷೆ ನಂತರ ಮೃತ ದೇಹವನ್ನು ಅವರ ಸಂಬಂಧಿಕರಿಗೆ ಬಿಟ್ಟು ಕೊಡಲು ಆದೇಶಿಸಿ ಬಂದಿರುತ್ತೇನೆ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಬಯಸುವಿರಾ?

ಉತ್ತರಃ ಸುಳ್ಳು.

**ಪ್ರಶ್ನೆಃ34)** ಪ್ರಾ.ಸಾ.15 ಇವರು ತನ್ನ ಮುಂದುವರೆದ ಸಾಕ್ಷ್ಯದಲ್ಲಿ ದಿಃ 16.10.2013 ರಂದು ಶವ ಪರೀಕ್ಷೆ ಮಾಡಿದ ನಂತರ ಮೃತನ ದೇಹದ ಮೇಲೆ ಇದ್ದ ಬಟ್ಟೆಯನ್ನು ವೈದ್ಯರು ತಂದು ತೆಗೆದುಕೊಟ್ಟಿದ್ದನ್ನು ತನ್ನ ಮುಂದೆ ತಿಪ್ಪೆಸ್ವಾಮಿಯವರು ಹಾಜರು ಪಡಿಸಿದ್ದರು, ಅದನ್ನು ಪಂಚರಾದ ರಾಜಪ್ಪ, ಶ್ರೀನಿವಾಸ ರವರ ಸಮಕ್ಷಮ ನಿ.ಪಿ.9 ಮಹಜರ್‌ನಡಿ ಅಮಾನತ್ತು ಪಡಿಸಿಕೊಂಡಿರುತ್ತೇನೆ, ಅವುಗಳನ್ನು ಮಾಲು ಪಟ್ಟಿಯಲ್ಲಿ ದಾಖಲಿಸಿ ನ್ಯಾಯಾಲಯದ ಅನುಮತಿಯನ್ನು ಪಡೆದಿರುತ್ತೇನೆ, ಮುಂದಿನ ತನಿಖೆಯನ್ನು ವೃತ್ತ ನೀರಿಕ್ಷಕರು ವಹಿಸಿಕೊಂಡಿರುತ್ತಾರೆ, ದಿಃ 28.10.2013 ರಂದು ಈ ಪ್ರಕರಣದಲ್ಲಿ ಇರುವ ಆರೋಪಿಗಳ ಪತ್ತೆಗಾಗಿ ಸಿಪಿಐ ಬೀರೂರು ರವರು ಸಿಬ್ಬಂದಿಗಳಾದ ಹೆಚ್.ಸಿ220, 227, ಪಿಸಿ.104, 649 ಹಾಗೂ 631 ರವರನ್ನು ತನ್ನ ಜೊತೆ ನೇಮಕ ಮಾಡಿ ಜ್ಞಾಪನ ಪತ್ರ ಕೊಟ್ಟಿದ್ದರು, ಈ ಹಿಂದೆ ಪಿರ್ಯಾದಿ ಒಂದು ಇನ್‌ಲಾಂಡ್ ಲೆಟರ್‌ನ್ನು ತಂದು ಸಿಪಿಐ ರವರಿಗೆ ಹಾಜರು ಪಡಿಸಿದ್ದು, ಅದರಲ್ಲಿ 1ನೇ ಆರೋಪಿ ಪುಟ್ಟಸ್ವಾಮಿಯವರನ್ನು ಕೊಲೆ ಮಾಡಿಸಿರುತ್ತಾನೆ ಎಂದು ತಿಳಿಸಿದ್ದು, ಅವರ ಮೇಲೆ ಅನುಮಾನವಿರುತ್ತೆ ಎಂದು ತಿಳಿಸಿರುತ್ತಾರೆ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಬಯಸುವಿರಾ?

**ಉತ್ತರಃ** ಸುಳ್ಳು.

**ಪ್ರಶ್ನೆಃ35)** ಪ್ರಾ.ಸಾ.15ರವರು ತನ್ನ ಮುಂದುವರೆದ ಸಾಕ್ಷ್ಯದಲ್ಲಿ ಸಿಪಿಐ ರವರು ನೀಡಿದ ಆದೇಶದಂತೆ ರಾತ್ರಿ 1.30 ಗಂಟೆಗೆ ಲಿಂಗದಳ್ಳಿಗೆ ಹೋಗಿ 1ನೇ ಆರೋಪಿಯನ್ನು ಕರೆದುಕೊಂಡು, 2 ಗಂಟೆಗೆ ಬೀರೂರಿಗೆ ಬಂದು, ವೃತ್ತ ನಿರೀಕ್ಷಕರ ಮುಂದೆ ಹಾಜರು ಪಡಿಸಿದ್ದು, ಅವರು ಆತನನ್ನು ವಿಚಾರಣೆಗೆ ಒಳಪಡಿಸಿದಾಗ 1ನೇ ಆರೋಪಿಗೂ ಮೃತ ಪುಟ್ಟಸ್ವಾಮಿಗೂ ಆಸ್ತಿ ವಿವಾದ ಇದಿದ್ದರಿಂದ ಬೆಂಗಳೂರಿನ

*ಮುನಿರತ್ನ, ರಮೇಶ ಮತ್ತು ಚಂದ್ರಪ್ಪ ರವರ ಮೂಲಕ 3 ಲಕ್ಷ ರೂ ಡೀಲ್ ಕೊಟ್ಟು, ಮುಂಗಡವಾಗಿ 54 ಸಾವಿರ ಕೊಟ್ಟು ತಾನೇ ಕೊಲೆ ಮಾಡಿಸಿದ್ದೇನೆ ಎಂದು ಒಪ್ಪಿಕೊಂಡಿರುತ್ತಾರೆ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಬಯಸುವಿರಾ?*

*ಉತ್ತರಃ ಸುಳ್ಳು.*

*ಪ್ರಶ್ನೆಃ36) ಪ್ರಾ.ಸಾ.15 ಸಾಕ್ಷಿದಾರರು ತನ್ನ ಮುಂದುವರೆದ ಸಾಕ್ಷ್ಯದಲ್ಲಿ ಸಿಪಿಐ ರವರು ಆತನ ಸ್ವ‌ಇಚ್ಚಾ ಹೇಳಿಕೆ ಮಾಡಿಕೊಂಡು ನಮ್ಮ ಜೊತೆ ಆತನನ್ನು ಕಳುಹಿಸಿಕೊಟ್ಟರು, ಆತನನ್ನು ವಾಹನದಲ್ಲಿ ಕರೆದುಕೊಂಡು ಸಿಬ್ಬಂಧಿಯೊಂದಿಗೆ ಉಳಿದ ಆರೋಪಿಗಳನ್ನು ಪತ್ತೆ ಮಾಡಲು ಬೆಂಗಳೂರಿನ ಬನ್ನೆರುಘಟ್ಟಕ್ಕೆ 1ನೇ ಆರೋಪಿ ಕರೆದುಕೊಂಡು ಹೋಗಿ, 2ನೇ ಆರೋಪಿಯ ಮನೆಯನ್ನು ತೋರಿಸಿದರು, 2ನೇ ಆರೋಪಿ ಅಲ್ಲಿ ಇದ್ದರು, ಆತನನ್ನು ವಶಕ್ಕೆ ತೆಗೆದುಕೊಂಡೆವು, ಆತನು ಕೊಟ್ಟ ಮಾಹಿತಿಯಂತೆ ಬನ್ನೆರುಘಟ್ಟ ರಸ್ತೆಯಲ್ಲಿ ಇರುವ ಅರಕೆರೆಗೆ ಹೋಗಿ 3ನೇ ಆರೋಪಿ ರಮೇಶನ ಮನೆಯನ್ನು ತೋರಿಸಿದ್ದರು, ಅಲ್ಲಿದ್ದ ರಮೇಶನನ್ನು ವಶಕ್ಕೆ ಪಡೆದು, ಆತನ ನೀಡಿದ ಮಾಹಿತಿಯಂತೆ ಕೊತ್ತನೂರು ದಿನ್ನೆಗೆ ಹೋಗಿ ಅಲ್ಲಿ 4ನೇ ಆರೋಪಿಯ ಮನೆ ತೋರಿಸಿದ್ದು, ಅಲ್ಲಿದ 4ನೇ ಆರೋಪಿಯನ್ನು ವಶಕ್ಕೆ ಪಡೆದು ಬೆಳಿಗ್ಗೆ 9 ಗಂಟೆಗೆ ಬೆಂಗಳೂರಿನಿಂದ ಹೊರಟು ಬೀರೂರಿಗೆ ಮಧ್ಯಾಹ್ನ 1.30 ಗಂಟೆಗೆ ಬಂದು ವೃತ್ತ ನಿರೀಕ್ಷಕರ ಮುಂದೆ ಹಾಜರುಪಡಿಸಿದ್ದೇನೆ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಬಯಸುವಿರಾ?*

*ಉತ್ತರಃ ಸುಳ್ಳು.*

ಪ್ರಶ್ನೆ 37) ಪ್ರಾ. ಸಾ.18 ಶ್ರೀ ಜಿ.ಎಸ್.ವಿಶ್ವನಾಥ ಇವರು ತಮ್ಮ ಸಾಕ್ಷ್ಯದಲ್ಲಿ, ಘಟನಾ *ಸ್ಥಳಕ್ಕೆ ಭೇಟಿ ಕೊಟ್ಟು, ಪರಿಶೀಲನೆ ಮಾಡಿ, ಪಿರ್ಯಾದಿ ಶ್ರೀಮತಿ ಗೀತಾರವರನ್ನು ಬೇಟಿ ಮಾಡಿ ಆಕೆಯ ಮುಂದುವರೆದ ಹೇಳಿಕೆಯನ್ನು ಪಡೆದುಕೊಂಡು, ದಿಃ 19.10.2013 ರಂದು ಈ ಕೇಸಿನ ಸಾಕ್ಷಿದಾರರಾದ ವಿನಯ್ ಕುಮಾರ್, ಮಲ್ಲಿಕಾರ್ಜುನ, ಗೌರಮ್ಮ ಲಕ್ಷ್ಮಿ ತ್ರಿವೇಣಿ, ನಾಗಮ್ಮ ಪಾರ್ವತಮ್ಮ ಕನಕ*

ಪ್ರಸಾದ್, ಶ್ಯಾಮಲ ಮತ್ತು ರಮೇಶ ರವರ ಹೇಳಿಕೆಯನ್ನು ಪಡೆದುಕೊಂಡು, ದಿಃ 28.10.2013 ರಂದು ಈ ಕೇಸಿನ ಪಿರ್ಯಾದಿ ಗೀತಾರವರು ಠಾಣೆಗೆ ಹಾಜರಾಗಿ ತನ್ನ ಮನೆಗೆ ಲಿಂಗದಹಳ್ಳಿ ಪೋಸ್ಟ್ ಆಫೀಸ್‌ನಿಂದ ತನ್ನ ಗಂಡನ ಹೆಸರಿಗೆ ಒಂದು ಇನ್‌ಲಾಂಡ್ ಕವರ್ ಬಂದಿದ್ದು, ಅದರಲ್ಲಿ ತನ್ನ ಗಂಡ ಪುಟ್ಟಸ್ವಾಮಿಯನ್ನು, 1ನೇ ಆರೋಪಿ ಆಸ್ತಿ ವಿಚಾರದಲ್ಲಿ ಕೊಲೆ ಮಾಡಿಸಿ, ತನ್ನ ಅತ್ತೆ ಮಾವನ ಪಾಲಿನ ಆಸ್ತಿಯಲ್ಲಿ ಅಡಿಕೆ ತೋಟದ ಅಡಿಕೆಯನ್ನು ಕುಯ್ಯಲು ತಿಳಿಸಿ, ತರೀಕೆರೆ ಅಡಿಕೆ ವ್ಯಾಪಾರಿಯಿಂದ 5 ಲಕ್ಷ ಪಡೆದಿದ್ದಾರೆಂದು ತಿಳಿಸಿದ್ದರು, ಆ ಪತ್ರ ಬಂದ ಮೇಲೆ ಅನುಮಾನ ವ್ಯಕ್ತ ಪಡಿಸಿದ್ದರು ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಬಯಸುವಿರಾ?

ಉತ್ತರಃ ಸುಳ್ಳು.

ಪ್ರಶ್ನೆಃ38) ಪ್ರಾ.ಸಾ.18 ಇವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ಅದೇ ದಿನ ಅನುಮಾನಾಸ್ಪದ ವ್ಯಕ್ತಿ ಕೃಷ್ಣಮೂರ್ತಿಯನ್ನು ಠಾಣಾ ಸಿಬ್ಬಂದಿ ಹೆಚ್‌ಸಿ220 ಮತ್ತು 227 ರವರು ಕರೆತಂದು, ರಾತ್ರಿ 11.30 ಕ್ಕೆ ಹಾಜರುಪಡಿಸಿದರು, ಆತನನ್ನು ವಿಚಾರಣೆಗೆ ಒಳಪಡಿಸಿ ಸ್ವಇಚ್ಛಾ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ, ಆತ ತನ್ನ ಸ್ವಇಚ್ಛಾ ಹೇಳಿಕೆಯಲ್ಲಿ ಆಸ್ತಿ ವಿಚಾರದಲ್ಲಿ ಪುಟ್ಟಸ್ವಾಮಿ ತೊಂದರೆ ಕೊಡುತ್ತಿದ್ದು, ಇದರಿಂದ ಬೆಸತ್ತ ತಾನು ಬೆಂಗಳೂರಿನ ಮುನಿರತ್ನಂ, ರಮೇಶ ಮತ್ತು ಚಂದ್ರ ರವರಿಗೆ ಪುಟ್ಟಸ್ವಾಮಿಯನ್ನು ಮುಗಿಸಲು 3 ಲಕ್ಷ ರೂಪಾಯಿಗೆ ಸುಪಾರಿ ಕೊಟ್ಟಿದ್ದೆ, ಅವರನ್ನು ತೋರಿಸಿಕೊಡುತ್ತೇನೆ ಎಂದು ಒಪ್ಪಿಕೊಂಡ ಮೇರೆಗೆ ಆತನ ಜೊತೆಯಲ್ಲಿ ಠಾಣಾ ಸಿಬ್ಬಂದಿಗಳಾದ ಹೆಚ್‌ಸಿ.220 ಮತ್ತು 227 ಮತ್ತು ಪಿಸಿ.104, 631 ರವರನ್ನು ಖಾಸಗಿ ವಾಹನದಲ್ಲಿ ಬೆಂಗಳೂರಿಗೆ ಕಳುಹಿಸಿಕೊಟ್ಟೆ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಬಯಸುವಿರಾ?

ಉತ್ತರಃ ಸುಳ್ಳು.

*ಪ್ರಶ್ನೆ:39) ಪ್ರಾ.ಸಾ.18 ಸಾಕ್ಷಿದಾರರು ತನ್ನ ಮುಂದುವರೆದ ಸಾಕ್ಷ್ಯದಲ್ಲಿ 29.10.2013 ರಂದು ಸಿಬ್ಬಂಧಿಗಳು 2 ರಿಂದ 4ನೇ ಆರೋಪಿಗಳನ್ನು 1ನೇ ಆರೋಪಿಯ ಸಹಾಯದಿಂದ ಪತ್ತೆ ಹಚ್ಚಿ ತನ್ನ ಮುಂದೆ ಹಾಜರು ಪಡಿಸಿರುತ್ತಾರೆ, ಸದರಿ 3 ಜನ ಆರೋಪಿಗಳನ್ನು ಕೂಲಂಕುಷವಾಗಿ ವಿಚಾರಣೆ ಒಳಪಡಿಸಿ ಅವರ ಸ್ವಇಚ್ಛಾ ಹೇಳಿಕೆಯನ್ನು ಪಡೆದಿರುತ್ತೇನೆ, ಅವರು ಸ್ವಇಚ್ಛಾ ಹೇಳಿಕೆಯಲ್ಲಿ ತಾವು ಉಪಯೋಗಿಸಿದ ಮೊಬೈಲ್ ನಂಬರ್‌ನ್ನು ತಿಳಿಸಿರುತ್ತಾರೆ, 1ನೇ ಆರೋಪಿಯ ಬಳಿ ಇದ್ದ ಮೊಬೈಲ್ ಫೋನ್ ಮತ್ತು ಸಿಮ್ ಸಂಖ್ಯೆ 9449900846 ಮತ್ತು 2ನೇ ಆರೋಪಿಯ ಮೊಬೈಲ್ ಸಿಮ್ ನಂಬರ್ 9739259019 ಅವುಗಳನ್ನು ಪಂಚರ ಸಮಕ್ಷಮ ನಿ.ಪಿ.8 ರ ಮಹಜರ್‌ನಡಿಯಲ್ಲಿ ಅಮಾನತ್ತು ಪಡಿಸಿಕೊಂಡು, 1ನೇ ಆರೋಪಿ ಕಡೆಯಿಂದ ಜಪ್ತಿಪಡಿಸಿಕೊಂಡ ಮೊಬೈಲ್‌ನ ಐ.ಎಂ.ಇ.ಐ ನಂಬರ್ ನೋಡಲಾಗಿ ಅದು 2 ಸಿಮ್‌ನ ಮೊಬೈಲ್ ಆಗಿದ್ದು, ಅದರ ಐ.ಎಂ.ಇ.ಐ ನಂಬರ್ 35283005887116 / 35283005887117 ಆಗಿರುತ್ತದೆ* ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಬಯಸುವಿರಾ?

ಉತ್ತರಃ ಸುಳ್ಳು.

*ಪ್ರಶ್ನೆ:40) ಪ್ರಾ.ಸಾ.18 ಸಾಕ್ಷಿದಾರರು ತನ್ನ ಮುಂದುವರೆದ ಸಾಕ್ಷ್ಯದಲ್ಲಿ ಆರೋಪಿಗಳು ಕೊಟ್ಟ ಸ್ವಇಚ್ಛಾ ಹೇಳಿಕೆ ಮೇರೆಗೆ ಪುಟ್ಟಸ್ವಾಮಿ ಕೊಲೆ ಮಾಡಿದ ಸ್ಥಳ ತೋರಿಸಿದ್ದು, ಸದರಿ ಸ್ಥಳ ಬಳಿಗನೂರು ಆಲದಹಳ್ಳಿಗೆ ಹೋಗುವ ಟಾರ್ ರಸ್ತೆಯಾಗಿರುತ್ತದೆ, ಕೃತ್ಯಕ್ಕೆ ಉಪಯೋಗಿಸಿದ ಕ್ವಾಲೀಸ್ ವಾಹನ ನಿಲ್ಲಿಸಿದ ಸ್ಥಳವನ್ನು ತೋರಿಸುವುದಾಗಿ ತಮ್ಮನ್ನು ಕರೆದುಕೊಂಡು ಕಡೂರು ಬೀರೂರು ರಸ್ತೆಯ ಪಕ್ಕಕ್ಕೆ ಬರುವ ಲಕ್ಷ್ಮಯ್ಯ ಬಡಾವಣೆ ಜಾಲಿ ಗಿಡದ ಮರೆಯಲ್ಲಿ ನಿಲ್ಲಿಸಿದ್ದೆವು ಎಂದು ವಾಹವನ್ನು ತೋರಿಸಿದರು, ಸದರಿ ವಾಹನವು ಕ್ವಾಲೀಸ್ ವಾಹನವಾಗಿದ್ದು, ಹಿಂದೆ ಮುಂದೆ ನಂಬರ್ ಪ್ಲೇಟ್ ಇರಲಿಲ್ಲ, ಕಾರಿನ ಒಳಗೆ ಲೂನಾರ್ ಕಂಪನಿಯ ಚಪ್ಪಲಿ ಇತ್ತು, ಅದನ್ನು ಯಾರದು ಎಂದು ಕೇಳಿದಾಗ ಮೃತ ಪುಟ್ಟಸ್ವಾಮಿಯ ಚಪ್ಪಲಿ ಎಂದು ಹೇಳಿದರು, ಆ ವಾಹನವನ್ನು ಸ್ಥಳದಲ್ಲಿ ಪಂಚನಾಮೆ ಅಡಿಯಲ್ಲಿ ಅಮಾನತ್ತು ಪಡಿಸಿಕೊಂಡು ಫೋಟೋ*

ತೆಗೆಸಿರುತ್ತೇನೆ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಬಯಸುವಿರಾ?

ಉತ್ತರಃ ಸುಳ್ಳು

ಪ್ರಶ್ನೆಃ41) ಪ್ರಾ.ಸಾ.18 ರವರು ತನ್ನ ಮುಂದುವರೆದ ಸಾಕ್ಷ್ಯದಲ್ಲಿ ಅದೇ ಸಂಜೆ ವೈನ್ ಶಾಪ್ ಹತ್ತಿರ ರಮೇಶ ಮತ್ತು ಪುಟ್ಟಸ್ವಾಮಿಯನ್ನು ಕರೆಸಿಕೊಂಡು ಬ್ರಾಂಡಿಯನ್ನು ಕುಡಿದು, ತಿಂದು ರಮೇಶನನ್ನು ಅಲ್ಲೆ ಬಿಟ್ಟು ಪುಟ್ಟಸ್ವಾಮಿಯನ್ನು ಕಾರಿನಲ್ಲಿ ಕೂರಿಸಿಕೊಂಡು ಲಿಂಗದಹಳ್ಳಿಯ ರಸ್ತೆ ಕಡೆ ಬಂದಿರುತ್ತಾರೆ, ಕುಡಿದಿದ್ದ ಪುಟ್ಟಸ್ವಾಮಿಯನ್ನು ರಸ್ತೆಯಲ್ಲಿ ಮಲಗಿಸಿ ತಾವು ತಂದಿದ್ದ ಕ್ವಾಲೀಸ್ ವಾಹನವನ್ನು ಆತನ ಮೇಲೆ ಹತ್ತಿಸಿ ಸಾಯಿಸಿದ್ದಾಗಿ ಒಪ್ಪಿಕೊಂಡಿರುತ್ತಾರೆ, ರಮೇಶ ಮತ್ತು ಚಂದ್ರಪ್ಪ ಅದೇ ರೀತಿ ತನ್ನ ಮುಂದೆ ಸ್ವಇಚ್ಛಾ ಹೇಳಿಕೆಯನ್ನು 2ನೇ ಆರೋಪಿ ಕೊಟ್ಟಂತೆ ಅನುಸರಿಸಿ ಹೇಳಿಕೆಯನ್ನು ಕೊಟ್ಟಿರುತ್ತಾರೆ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಬಯಸುವಿರಾ?

ಉತ್ತರಃ ಸುಳ್ಳು.

ಪ್ರಶ್ನೆಃ42) ಪ್ರಾ.ಸಾ.18ರವರು ತನ್ನ ಮುಂದುವರೆದ ಸಾಕ್ಷ್ಯದಲ್ಲಿ 1ನೇ ಆರೋಪಿಯನ್ನು ತನ್ನ ಮುಂದೆ ಹಾಜರು ಪಡಿಸಿದಾಗ ಆತನ ಸ್ವಇಚ್ಛಾ ಹೇಳಿಕೆಯನ್ನು ಮಾಡಿಕೊಂಡಿದ್ದು, ಆತ ತನ್ನ ತಮ್ಮ ಪುಟ್ಟಸ್ವಾಮಿಯನ್ನು ಆಗಾಗ್ಗೆ ಆಸ್ತಿ ವಿಚಾರದಲ್ಲಿ ತಕರಾರು ಮಾಡುತ್ತಾನೆ, ಕುಡಿದು ಬಂದು ಗಲಾಟೆ ಮಾಡುತ್ತಾನೆ, ಆದ್ದರಿಂದ ಆತನನ್ನು ಮುಗಿಸಬೇಕೆಂದು 1ನೇ ಆರೋಪಿಯ ವಿಧ್ಯಾರ್ಥಿ ಸುನೀಲ್ ರವರ ಮೂಲಕ 2ನೇ ಆರೋಪಿಯನ್ನು ಪರಿಚಯಿಸಿಕೊಂಡು, ಆತನ ಮೂಲಕ ತನ್ನ ತಮ್ಮ ಪುಟ್ಟಸ್ವಾಮಿಯನ್ನು ಕೊಲೆ ಮಾಡಿಸಲು ಸುಪಾರಿ ಕೊಟ್ಟಿದ್ದೇನೆ ಎಂದು ತಿಳಿಸಿರುತ್ತಾರೆ, ತಾನು ಮೊಬೈಲ್ ಸಿಮ್ ನಂಬರ್ 9742060615ನ್ನು ಕೊಟ್ಟು, ಇದರ ಮೂಲಕ ತನ್ನನ್ನು 9742060568ಗೆ ಸಂಪರ್ಕಿಸಲು ಹೇಳಿರುತ್ತಾರೆ, ತನ್ನನ್ನು ಕರೆದುಕೊಂಡು ಹೋದರೆ ಉಳಿದ ಆರೋಪಿಗಳ ಮನೆಯನ್ನು ತೋರಿಸಿ ಕೊಡುವುದಾಗಿ ತಿಳಿಸಿರುತ್ತಾರೆ, ದಿಃ 25.01.2014 ರಂದು ಆರೋಪಿಗಳ ವಿರುದ್ದ ಅಂತಿಮ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ ಎಂದು

**ನುಡಿದಿರುತ್ತಾರೆ. ಈ ಬಗ್ಗೆ ನೀವೇನಾದರೂ ಹೇಳಲು ಬಯಸುವಿರಾ?**

**ಉತ್ತರಃ ಸುಳ್ಳು.**

**ಪ್ರಶ್ನೆ-43) ಃ ನೀವೇನಾದರೂ ಹೇಳುವುದು ಇದೆಯೇ?**

**ಉತ್ತರ ಃ ಇಲ್ಲ.**

**ಪ್ರಶ್ನೆ-44) ಃ ನಿಮ್ಮ ಪರವಾಗಿ ಯಾವುದಾದರೂ ಸಾಕ್ಷಿ ವಿಚಾರಣೆ ಮಾಡಿಸುತ್ತೀರ?**

**ಉತ್ತರ ಃ ಇಲ್ಲ.**

**ಆರೋಪಿಗಳಿಗೆ ಅವರು ತಿಳಿದ ಭಾಷೆಯಲ್ಲಿ ಹೇಳಿಕೆಯನ್ನು ಓದಿ ಹೇಳಲಾಗಿ, ಅದರಂತೆ ಆರೋಪಿಗಳ ಹೇಳಿಕೆಯನ್ನು ದಾಖಲು ಮಾಡಲಾಗಿದೆ ಎಂದು ದೃಢೀಕರಿಸುತ್ತೇನೆ.**

**ದಿನಾಂಕ ಃ29ನೇ ಡಿಸೆಂಬರ್ ಮಾಹೆ 2016.**

ಸಹಿ

**2ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು, ಚಿಕ್ಕಮಗಳೂರು.**

ಆರೋಪಿ ಸಹಿ ಃ ಸಹಿ